# Saturday 09th November 2024

## 8th International Conference CSITSS-2024 program at RVCE Campus

ಉದಯಕಾಲ
ಕನ್ನಡಿಗರ ಜೀವಾಳ

# ಆರ್‌ವಿಸಿಇ ಕ್ಯಾಂಪಸ್‌ನಲ್ಲಿ ಕಾರ್ಯಾಗಾರ




**ಉದಯಕಾಲ ನ್ಯೂಸ್**

**ಯಶವಂತಪುರ:** ಬೆಂಗಳೂರು-ಮೈಸೂರು ಮುಖ್ಯರಸ್ತೆಯಲ್ಲಿರುವ ಆರ್.ವಿ.ಸಿ.ಇ ಕ್ಯಾಂಪಸ್‌ನ ಐಇಎಂ ಆಡಿಟೋರಿಯಮ್ ನಲ್ಲಿ 8ನೇ ಐಇಇಇ ಅಂತಾರಾಷ್ಟ್ರೀಯ ಸಮ್ಮೇಳನ ಸಿಎಸ್‌ಐಟಿಎಸ್‌ಎಸ್- 2024 ಕಾರ್ಯಕ್ರಮ ಅಂಗವಾಗಿ ಕಂಪ್ಯೂಟೇಶನಲ್ ಸಿಸ್ಟಮ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸುಸ್ಥಿರ ಪರಿಹಾರಗಳ ಕುರಿತು ಮೂರು ದಿನಗಳ ಸಮ್ಮೇಳನ ಹಮ್ಮಿಕೊಳ್ಳಲಾಗಿತ್ತು.

ಯುಎಸ್‌ಎ ಮಿಯಾಮಿ ಸ್ಕೂಲ್ ಆಫ್ ಕಂಪ್ಯೂಟಿಂಗ್ ಮತ್ತು ಮಾಹಿತಿ ವಿಜ್ಞಾನ ಫ್ಲೋರಿಡಾ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯದ ರೈಡರ್ ಪ್ರೊ.ಎಸ್.ಎಸ್.ಅಯ್ಯಂಗಾರ್ ಉದ್ಘಾಟನೆ ಮಾಡಿದರು.

ನಂತರ ಮಾತನಾಡಿದ ಅವರು, ದೇಶಾದ್ಯಂತ ಹಲವು ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿದ್ದೇನೆ. ಆರ್.ವಿ.ಸಿ.ಇ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪ್ರಾಧ್ಯಾಪಕರಿಂದ ಗುಣಮಟ್ಟದ ಭೋಧನೆ ಒದಗಿಸುತ್ತಿದೆ. ಯಾವ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದೇನೆ, ಅಲ್ಲಿರುವ ಬೋಧಕರು ಯಾವ್ಯಾವ ವಿಷಯಗಳಲ್ಲಿ ಎಷ್ಟು ಪರಿಣಿತಿ ಹೊಂದಿದ್ದಾರೆ, ಶಿಕ್ಷಣ ಹೊರತುಪಡಿಸಿ ಎಂತಹ ಕೌಶಲ್ಯಾಭಿವೃದ್ಧಿ ಕಲಿಕೆಗೆ ಒತ್ತು ನೀಡುತ್ತಿದ್ದಾರೆ ಎಂಬುದರ ಮೇಲೆ ವಿದ್ಯಾರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ ಎಂದರು.

ಯುಎಸ್‌ಎ ಮೈಲಾಹ್ ಸಿಯಾಟಲ್ ಸಹ-ಸಂಸ್ಥಾಪಕ ಮತ್ತು ಸಿಎಂಒ ಚೈತ್ರಾ, ವೆದುಲ್ಲಪಲ್ಲಿ ಮಾತನಾಡಿ, ಶಿಕ್ಷಣದ ಭವಿಷ್ಯವನ್ನು ರೂಪಿಸುವಲ್ಲಿ ತಂತ್ರಜ್ಞಾನ ಮಹತ್ವದ ಪಾತ್ರ ವಹಿಸುತ್ತದೆ. ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಕೆ ಶೈಕ್ಷಣಿಕ ಪ್ರಗತಿಗೆ ಪೂರಕ ವಾತಾವರಣ ಸೃಷ್ಟಿ ಮಾಡುತ್ತದೆ ಎಂದರು.

ಡಾರ್ಟ್ಮಂಡ್ ನ ಯುನಿವರ್ಸಿಟಿ ಆಫ್ ಅಪ್ಲೈಡ್ ವಿಜ್ಞಾನ ಮತ್ತು ಕಲೆ ಕಾಲೇಜಿನ ಪ್ರೊ. ಡಾ.-ಇಂಗ್ ವಿನೋದ್ ರಾಜಮಣಿ, ಐಇಇಇ ಬೆಂಗಳೂರು ವಿಭಾಗ ಐಐಎಸ್‌ಇ ಬೆಂಗಳೂರು ಅಧ್ಯಕ್ಷ ಡಾ.ಟಿ.ಶ್ರೀನಿವಾಸ್, ಆರ್.ಎಸ್.ಎಸ್.ಟಿ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್, ಪ್ರಾಂಶುಪಾಲ ಡಾ.ಕೆ.ಎನ್.ಸುಬ್ರಮಣ್ಯ, ಉಪ ಪ್ರಾಂಶುಪಾಲೆ ಡಾ.ಗೀತಾ, ಹೆಚ್.ಒ.ಡಿ.ಡಾ.ಎಂ.ಕೃಷ್ಣ ಉಪಸ್ಥಿತರಿದ್ದರು.

Bengaluru Edition
Nov 09, 2024 Page No. 2
Powered by: erelego.com